International Journal of Kannada Research 2020; 6(3): 74-76

International Journal of Kannada Research
www.kannadajournal.com

ISSN: 2454–5813
IJKR 2020; 6(3): 74-76
© 2020 IJKR
www.kannadajournal.com
Received: 04-05-2020
Accepted: 06-06-2020

**ಡಾ. ಗಂಗಾಂಬಿಕಾ ಚೌಗಲಾ**
ಸಹಪ್ರಾಧ್ಯಾಪಕರು
ಕೆ.ಎಲ್.ಇ ಸಂಸ್ಥೆಯ,
ಜಿ.ಆಯ್.ಬಾಗೇವಾಡಿ ಕಲಾ,
ವಿಜ್ಞಾನ ಹಾಗೂ ವಾಣಿಜ್ಯ
ಮಹಾವಿದ್ಯಾಲಯ, ನಿಪ್ಪಾಣಿ–
೫೯೧೨೩೭ ಜಿ–ಬೆಳಗಾವಿ

**Corresponding Author:**
**ಡಾ. ಗಂಗಾಂಬಿಕಾ ಚೌಗಲಾ**
ಸಹಪ್ರಾಧ್ಯಾಪಕರು
ಕೆ.ಎಲ್.ಇ ಸಂಸ್ಥೆಯ,
ಜಿ.ಆಯ್.ಬಾಗೇವಾಡಿ ಕಲಾ,
ವಿಜ್ಞಾನ ಹಾಗೂ ವಾಣಿಜ್ಯ
ಮಹಾವಿದ್ಯಾಲಯ, ನಿಪ್ಪಾಣಿ–
೫೯೧೨೩೭ ಜಿ–ಬೆಳಗಾವಿ

# ವಚನ ಸಾಹಿತ್ಯಕ್ಕೆ ಶರಣರ ಕೊಡುಗೆ

**ಡಾ. ಗಂಗಾಂಬಿಕಾ ಚೌಗಲಾ**

## ಯುಗ ಧರ್ಮ

೧೨ನೇ ಶತಮಾನದ ಮಧ್ಯದಿಂದ ೧೫ನೇ ಶತಮಾನದವರೆಗಿನ ಈ ಯುಗದಲ್ಲಿ ಸಾಮ್ರಾಜ್ಯಗಳ ಉದಯಾಸ್ತಗಳು, ಯುದ್ಧ ಕೋಲಾಹಲಗಳು ಆಗಿ ಜನಜೀವನವನ್ನೇ ಅಲ್ಲಾಡಿಸಿದವು. ಕಲ್ಯಾಣ ಚಾಲುಕ್ಯ ವಂಶದ ವೈಭವ ಆರನೇಯ ವಿಕ್ರಮಾದಿತ್ಯ, ಮೂರನೇಯ ಸೋಮೇಶ್ವರ, ಇವರಲ್ಲಿ ಕೊನೆಮುಟ್ಟಿ ಹನ್ನೆರಡನೇ ಶತಮಾನದ ಮಧ್ಯ ಕಾಲಕ್ಕೆ ಇಳಿಮುಖವಾಯಿತು. ಕೈಲಾಗದ ಮೂರನೇಯ ತೈಲಪನನ್ನು ಹೆಸರಿಗೆ ಮಾತ್ರ ಅರಸನನ್ನಾಗಿರಿಸಿ ಕಲಚೂರ್ಯ ವಂಶದ ಬಿಜ್ಜಳನು ರಾಜ್ಯಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡ ದಕ್ಷಿಣ ಕರ್ನಾಟಕದಲ್ಲಿ ವಿಷ್ಣುವರ್ಧನನ ಕಾಲದಿಂದ ಸ್ವತಂತ್ರವಾದ ಹೊಯ್ಸಳರು ಪ್ರಬಲರಾಗಿ ರಾಜ್ಯ ವಿಸ್ತಾರ ಕೈಗೊಂಡರು.

## ಬಸವ ಯುಗದ ವೈಶಿಷ್ಟ್ಯಗಳು

ಕನ್ನಡ ಸಾಹಿತ್ಯ ಮಾರ್ಗದಿಂದ ದೇಸಿಯ ಕಡೆಗೆ ಸಂಕ್ರಮಣ ಹೊಂದಿದ ಕಾಲ. ವಚನ ಎಂಬ ಸಾಹಿತ್ಯದ ಉದಯ ಹಾಗೂ ವೈವಿಧ್ಯಯುತವಾದ ಅದರ ನಿರ್ಮಾಣ ಸಂಪತ್ತಿ, ವಚನವೆಂಬುದು ಭಾವಗೀತೆಯ ಲಕ್ಷಣದಿಂದ ಕೂಡಿದ ಅನುಭಾವ ಗದ್ಯ ಸಾಹಿತ್ಯದ ಗುಣದಿಂದ ಕೂಡಿದ್ದು, ರಗಳೆ, ತ್ರಿಪದಿ, ಷಟ್ಪದಿ, ಅಚ್ಚಗನ್ನಡ ಛಂದೋ ರೂಪಗಳಲ್ಲಿ ಗ್ರಂಥಗಳ ರಚನೆಯಾದದ್ದು. ಕಾಲ ಜ್ಞಾನ, ನೀತಿ ಪದ್ಯಗಳು, ವ್ಯಾಖ್ಯಾನ, ಗದ್ಯ ನಾಮಾವಳಿ ಈ ಬಗೆಯ ಲಘು ರಚನೆಗಳು ಹೇರಳವಾದವು. ಚಂಪೂ ಕಾವ್ಯಗಳು ಸಾಮಾನ್ಯವಾಗಿ ಹದಿಮೂರು ಮತ್ತು ಹದಿನಾಲ್ಕನೇ ಶತಮಾನದಲ್ಲಿ ಜೈನ ಕವಿಗಳಿಂದ ರಚಿತವಾದವು, ಕ್ವಚಿತ್ತಾಗಿ ವೀರಶೈವ ಮತ್ತು ಬ್ರಾಹ್ಮಣ ಕವಿಗಳಿಂದ ಕೆಲವು ಚಂಪೂ ಕಾವ್ಯಗಳ ರಚನೆ.
ಈ ಯುಗದ ಕೃತಿಗಳಲ್ಲಿ ಧಾರ್ಮಿಕ ಪ್ರಜ್ಞೆ ವಿಶೇಷವಾಗಿದೆ. ಶಿವಶರಣರ ರಗಳೆಗಳು ಅಥವಾ ಚರಿತ್ರೆಗಳು ತೀರ್ಥಂಕರ ಚರಿತ್ರೆಗಳು, ವಿಷ್ಣು ಪುರಾಣಗಳು, ಭಾಷೆ ಮತ್ತು ಶೈಲಿಯ ದೃಷ್ಟಿಯಿಂದ ಈ ಯುಗದ ಸಂಕ್ರಮಣಾವಸ್ಥೆಯ ನಿದರ್ಶನವು ಸ್ಪಷ್ಟವಾಗಿದೆ. ಹಳಗನ್ನಡದಿಂದ ಹೊಸಗನ್ನಡಕ್ಕೆ ಪರಿವರ್ತನ ಹೊಂದುತ್ತಿರುವ ಅವಸ್ಥೆ. ಪ್ರಾಮಾಣಿಕ ಶೈಲಿ ಮತ್ತು ಸಂಕೀರ್ಣತೆ ಈ ಯುಗದ ನಡುಗನ್ನಡದಲ್ಲಿ ತೋರಿವೆ.
ಕನ್ನಡ ವರ್ಣ ಮಾಲೆಯಲ್ಲಿದ್ದ ರಳ್ ಅಕ್ಷರಗಳು ಉಚ್ಚಾರದಲ್ಲಿಯೂ ಬರವಣಿಗೆಯಲ್ಲಿಯೂ ಲೋಪ ಹೊಂದಿದ ಸೂಚನೆಗಳಿವೆ. ರಳ್, ಕ್ಷಳ್‌ಗಳ ಭೇದವನ್ನು ವಿಶೇಷವಾಗಿ ಪ್ರಾಸ ವಿಷಯದಲ್ಲಿ ಭೇದವನ್ನು ತಾನು ಪಾಲಿಸುವುದಿಲ್ಲವೆಂದು ಹೇಳಿ ಈ ವಿಷಯದಲ್ಲಿ ಮುಂದಿನ ಕವಿಗಳಿಗೆ ಮಾರ್ಗದರ್ಶಿಯಾದ. ರಸದೃಷ್ಟಿಯಿಂದ ಭಕ್ತಿರಸವು ಈ ಯುಗದಲ್ಲಿ ಉಕ್ಕಂದವಾಗಿ ಹರಿಯಿತು, ಜೊತೆಗೆ ಅದ್ಭುತವೂ ಮೆರೆಯಿತು. ವೀರ, ಶಾಂತ ರಸಗಳು ಜೈನ ಕಾವ್ಯಗಳಲ್ಲಿ ಆವಿಷ್ಕಾರ ಹೊಂದಿದವು. ಅಪವಾದವೆನ್ನುವಂತೆ ಶೃಂಗಾರರಸವನ್ನೊಂದೇ ಪ್ರತಿಪಾದಿಸಿದ ಮೊಟ್ಟಮೊದಲ ಕಾವ್ಯ 'ಲೀಲಾವತಿಯ ಜನ್ಮ' ರೂಪ ತಾಳಿತು. ಲೌಕಿಕ ಮತ್ತು ಶಾಸ್ತ್ರೀಯ ಕೃತಿಗಳನ್ನು ವೀರಶೈವರು ಸಾಮಾನ್ಯವಾಗಿ ಬರೆಯಲಿಲ್ಲ. ತಾತ್ವಿಕ, ಅನುಭಾವಿಕ ಕೃತಿಗಳನ್ನು ಮಾತ್ರ ರಚಿಸಿದರು. ಹೀಗಾಗಿ ಈ ಯುಗದಲ್ಲಿ ಪಂಡಿತ ಕವಿಗಳೊಂದಿಗೆ ಆಧ್ಯಾತ್ಮಿಕ, ಅನುಭಾವಿಕ ಕವಿಗಳ ಹೊಸ ಪರಂಪರೆ ಮೊಳೆಯಿತು.

## ವಚನ ಸಾಹಿತ್ಯದ ಲಕ್ಷಣಗಳು

ಹನ್ನೆರಡನೇಯ ಶತಮಾನವು ಕನ್ನಡ ಸಾಹಿತ್ಯದ ಸಂಕ್ರಮಣ ಹಾಗೂ ಸ್ವಾತಂತ್ರ್ಯ ಯುಗವಾಗಿತ್ತು. ಬಸವಣ್ಣನವರು ಅವೈದಿಕವಾದ ಜೈನ ಮತದ ವಿರುದ್ಧವಾಗಿ ವೈದಿಕ ಸನಾದಿಗಳ ವಿರುದ್ಧವಾಗಿಯೂ

ಬಂಡೆಬ್ಬಿಸಿ ವರ್ಣಗಳ ಸಂಕೋಲೆಗಳನ್ನು ಕಡೆದೊಗೆದು ಸಮಾಜವನ್ನು ಬಂಧಮುಕ್ತ ಮಾಡಿದರು. ಆಧ್ಯಾತ್ಮದ ಜಿಜ್ಞಾಸುಗಳಲ್ಲಿಯೂ ಒಂದೇ ಎಂದು ಅದಕ್ಕೆ ಜಾತಿ ಕೋಟಲೆಗಳಿಲ್ಲವೆಂದು, ಹೆಣ್ಣು–ಗಂಡುಗಳ ಭೇದವಿಲ್ಲವೆಂದೂ ಸಾರಿ ಸಮಾಜವನ್ನು ಕಲಕು–ಮಲಕು ಮಾಡಿದರು. ಮುಕ್ತಿ ಮಾರ್ಗವನ್ನು ಸರ್ವ ಮಾನವರಿಗೆ ತೆರೆದುಬಿಟ್ಟರು. ಸಾಮಾಜಿಕ, ಧಾರ್ಮಿಕ, ಕಟ್ಟು–ಕಟ್ಟಳೆಗಳಿಂದ ಹತ್ತಿಕ್ಕಲ್ಪಟ್ಟ ಆತ್ಮೀಕ ಶಕ್ತಿಗೆ ಪುಟ ಸಿಕ್ಕಂತಾಗಿ ಮೋಕ್ಷ ತೃಷೆಯು ಭುಗಿಲೆಂದು ಆತ್ಮೀಕ ಶಕ್ತಿಯ ಜ್ಞಾನ ಪಿಪಾಸೆಯ ಬೆಳಕು ಕಾಣಹತ್ತಿತು. ಇದಕ್ಕೆ ಕರ್ನಾಟಕದ ಆಧ್ಯಾತ್ಮ ಯುಗವೆಂದು ಹೇಳಬಹುದು. ಈ ಸಾಧಕರ, ಶಿವಶರಣರ ಅನುಭಾವಿಗಳ ಉಸಿರೇ ವಚನಗಳು.

ಚಂಪೂ ಕಾವ್ಯಗಳಲ್ಲಿ ಗದ್ಯಕ್ಕೆ ವಚನಗಳೆಂದೇ ಕರೆಯುತ್ತಿದ್ದರು. ಬಸವಣ್ಣ ಈ ವಚನಗಳನ್ನೆ ವಿಶಿಷ್ಟ ರೀತಿಯಿಂದ ಉಪಯೋಗಿಸಿ ಅವುಗಳಿಗೆ ಜೀವಕಳೆಯನ್ನು ತುಂಬಿ ವಚನಗಳಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ಸ್ಥಾನವನ್ನು ಕಲ್ಪಿಸಿಕೊಟ್ಟರು. ವಚನ ವಾಙ್ಮಯಕ್ಕೆ ಬಸವಣ್ಣನವರಿಂದ ಕಳೆ ಬಂದುದರಾದರೂ ಅದಕ್ಕಿಂತಲೂ ಮೊದಲೇ ಈ ಸಾಹಿತ್ಯ ಪ್ರಾರಂಭವಾಗಿದೆ. ಜೇಡರ ದಾಸಿಮಯ್ಯ, ಸಕಲೇಶ ಮಾದರಸ, ಗುಣದರಸಿ ವೀರಣ್ಣ ಮೊದಲಾದವರು ವಚನದಲ್ಲಿಯೇ ಬರೆಯಲು ಪ್ರಾರಂಭಿಸಿದರು. ಬಸವ ಶರಣ ಬಸವಾದಿಗಳ ಕೈವಾಡದಿಂದ ವಚನಗಳು ಸರ್ವೋತ್ಕೃಷ್ಟವಾದ ಆಧ್ಯಾತ್ಮ ಜ್ಞಾನ, ಅನುಭವ, ವೇದೋಪನಿಷತ್ತುಗಳ ಸಾಮರ್ಥ್ಯ ಹಾಗೂ ಗುಣಗಳುಳ್ಳ ದಿವ್ಯ ವಾಙ್ಮಯವಿದು. ಬಸವ, ಶರಣ ಬಸವ, ಅಲ್ಲಮ ಪ್ರಭು ಮೊದಲಾದ ಶಿವಶರಣರು ವೀರಶೈವ ಮತದ ಪ್ರಚಾರಕ್ಕಾಗಿ, ಅನುಭವಗಳನ್ನು ಹೇಳುವುದಕ್ಕಾಗಿ ವಚನಗಳನ್ನು ಉಪಯೋಗಿಸಿದ್ದರಿಂದ ಇವು ವಚನಶಾಸ್ತ್ರವೆಂಬ ರೂಪವನ್ನೇ ತಾಳಿದವು.

ತಾತ್ವಿಕ ದೃಷ್ಟಿಯಿಂದ ನೋಡಿದರೆ ಮಾನವನು ಸುಜ್ಞಾನಿಯಾಗಿ ಶಿವೈಕ್ಯವನ್ನು ಹೊಂದುವವರೆಗಿನ ಎಲ್ಲ ತತ್ವಗಳ ವಿವೇಚನೆಯು ಈ ವಚನಗಳಲ್ಲಿ ಕಂಡು ಬರುವುದು. ಪರಮಾತ್ಮನ ಸ್ವರೂಪ, ಸೃಷ್ಟಿ ರಚನೆಯ ಕ್ರಮ, ಪರಮಾತ್ಮನ ಅಸ್ತಿತ್ವ, ಸಾಕ್ಷಾತ್ಕಾರ, ಸರ್ವಾರ್ಪಣ, ಜ್ಞಾನಯೋಗ, ಭಕ್ತಿ, ಕ್ರಿಯೆ, ಸಾಧಕನಿಗೆ ಅವಶ್ಯವಿದ್ದ ಗುಣ–ಶೀಲ–ಕರ್ಮಗಳು ಹೀಗೆ ವಚನಗಳಲ್ಲಿ ವರ್ಣಿಸಲ್ಪಟ್ಟಿವೆ. ಈ ವಚನ ವಾಂಗ್ಮಯಕ್ಕೆ ವೇದೊಪನಿಷತ್ತುಗಳಿಂದ ವಿಶೇಷವಾಗಿ ಶೈವಾಗಮಗಳಿಂದಲೇ ವಿಷಯವನ್ನು ಎತ್ತಿದ್ದಾರೆ. 'ಆದ್ಯರ ವಚನ ಪರುಷ ಕಂಡಯ್ಯ ಅವರು ಶೃತಿಯ ನೋಡಿ ಮಿಡಿದರು. ಏಕೆಂದರೆ ಪರಮಾತ್ಮನ ಜ್ಞಾನವಾಗಲೂ ಆದ್ಯರ ವಚನಗಳು ಬಹುವೈದ್ಯವಯ್ಯಾ' ಎಂದು ಮುಂತಾಗಿ ವಚನಕಾರರು ಹೇಳುತ್ತಾರೆ. ವಚನಗಳು ಕೇವಲ ನೀರಸವಾದ ತರ್ಕಗಳ ಹೆಚ್ಚೊತ್ತಿಗೆ ಎಂದು ಯಾರೂ ಅಲ್ಲಗಳೆಯುವಂತಿಲ್ಲ, ಭಕ್ತಿಯ ಭಾವಾವೇಶಗಳಿಂದ ತಲ್ಲೀನರಾದ ಶಿವಶರಣರ ಹೃದಯದಿಂದ ಹೊರಹೊರಟ ಈ ವಚನಗಳು ಕಾವ್ಯಮಯವಾಗಿವೆ. ಅಂತರಂಗದ ಶುದ್ಧಿಗಾಗಿ ಕವಿ ಹೃದಯ ಕಾತರಗೊಂಡಾಗ ಹೊರಹೊಮ್ಮಿದ ದಿವ್ಯ ಸ್ಫೂರ್ತಿಯ ಕಾವ್ಯಗಳಿವು. ಸಣ್ಣಸಣ್ಣ ವಾಕ್ಯಗಳಲ್ಲಿ ವಿಪುಲಾರ್ಥವನ್ನು ತುಂಬುವ ಅದರ ರೀತಿ ಬಾಣದಂತೆ ನೇರವಾಗಿ ಹೃದಯಕ್ಕೆ ತಗಲುವ ಅದರ ಸರಣಿ ದೇಶಿಗನ್ನಡದ ಬೆಡಗು ಮೋಹಕವಾಗಿವೆ. ಸುಂದರವಾದ ಭಾವಗೀತೆಯ ಲಕ್ಷಣದಿಂದ ಸಾಹಿತ್ಯದ ಮೌಲ್ಯಗಳಿಂದ ಒಡಗೂಡಿದೆ. ಈ ಕನ್ನಡ ಸಾಹಿತ್ಯದಲ್ಲಿ ಇಲ್ಲಿಯವರೆಗೆ ವ್ಯಕ್ತಿಯ ವ್ಯಕ್ತಿತ್ವವನ್ನು ಕನ್ನಡಿಯಂತೆ ತೋರುವ ಸಾಹಿತ್ಯದಿಂದಲೂ ಮನಸ್ಸಿನ ಚಿತ್ರಗಳನ್ನು ಅತ್ಯಂತ ಮನೋಹರವಾಗಿ ಚಿತ್ರಿಸಿವೆ ಇದುವೇ ವಚನ ವಾಙ್ಮಯದ ವೈಶಿಷ್ಟ್ಯ.

ಕಾವ್ಯವು ಕವಿಯ ದಿವ್ಯ ದರ್ಶನದ ಅನುಭವದ ವಾಣಿಯಾಗಿರಬೇಕೆಂಬ ಮಾತು ವಚನಗಳಿಗೆ ಪೂರ್ಣವಾಗಿ ಅನ್ವಯಿಸುತ್ತದೆ. ಚನ್ನಬಸವಣ್ಣನ ಜ್ಞಾನ, ಬಸವಣ್ಣನ ಭಕ್ತಿಯ ಉತ್ಕಟತೆ, ಪ್ರಭುದೇವರ ವೈರಾಗ್ಯ ಭಾವ, ಚೌಡಯ್ಯನ ಕಟು ವಿಡಂಬನೆಗಳ ವರ್ಣನೆಗಳು ರೋಮಾಂಚನಕಾರಿಯಾಗಿವೆ. ಉಪದೇಶ ಮಾಡುವ ರೀತಿ, ವರ್ಣನೆ, ಅಸಂಧಿಗ್ಧವಾಗಿ ವರ್ಣನಾತೀತವಾಗಿವೆ. ಉಪಮೇಯಗಳು ಒಮ್ಮೆಲೆ ಆಕರ್ಷಿಸುತ್ತವೆ. ಸಾಮಾನ್ಯವಾಗಿ ವಚನಗಳ ಲಕ್ಷಣಗಳು ಹತ್ತಾರು ರೀತಿ ಈ ವಚನಗಳಿಗೆ ಕಾವ್ಯದ ಕಟ್ಟು ಯಾವುದೇ ಇರದಿದ್ದರೂ ತಾನೇ ತಾನಾಗಿ ಸ್ವಾಭಾವಿಕವಾಗಿ ಕಾಣಿಸಿಕೊಂಡ ಅನುಪ್ರಾಸವುಳ್ಳ ಗತಿಬದ್ಧವಾದ ಕಾವ್ಯವನ್ನು ಕಾಣಬಹುದಾಗಿದೆ. ಅನೇಕ ವಚನಗಳನ್ನು ಏಕನಾದದ ಶೃತಿಯೊಂದಿಗೆ ಹಾಡುವ ವಾಡಿಕೆಯುಂಟು. ಒಟ್ಟಿನಲ್ಲಿ ವಚನ ವಾಙ್ಮಯವು ಸಾಹಿತ್ಯದ ಲಕ್ಷಣಗಳಿಂದ ತನ್ನದೇ ಆದ ವೈಶಿಷ್ಟ್ಯದಿಂದ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಈ ವಚನಗಳ ಬೆಡಗನ್ನು ವಚನಿಸಲು ಅಸಾಧ್ಯ. ಹಾಡಿಗೆ ಆನಂದ ಪಡಬೇಕು. ಇವುಗಳಲ್ಲಿ ಕಿರಿದರಲ್ಲಿ ಹಿರಿದಾದ ಭಾವವನ್ನು ತುಂಬುವ ವಚನಗಳು ಉಂಟು. 'ಆಸೆಯೇ ದಾಸತ್ವ, ನಿರಾಸೆಯೇ ಈಶತ್ವ, ಹಸಿವಿಂಗೆ ಲಯವಿಲ್ಲ, ವಿಷಯಕ್ಕೆ ಕುಲವಿಲ್ಲ, ತನ್ನ ತಾನರಿದಡೆ ತನ್ನರಿವೇ ಗುರು' ಈ ವಾಕ್ಯಗಳಲ್ಲಿಯ ಸೊಬಗು ಹರಿದು ಭಾವವನ್ನು ತುಂಬಿ ಸೂಸುತ್ತವೆ. ವಚನಕಾರರು ವರ್ಣನಾಕುಶಲರು ಪರಮಾತ್ಮನ ವಿಶ್ವರೂಪದ ವರ್ಣನೆಯನ್ನು ಎದೆ ತುಂಬಿ ವರ್ಣಿಸಿದ್ದಾರೆ. ಏಕೆಂದರೆ ವಚನಕಾರರು ವರ್ಣನಾತ್ಮಕ ವಚನಗಳ ಸೃಷ್ಟಿ ಮಾಡಿದ್ದು ಕಡಿಮೆ. ಉಪದೇಶಪೂರ್ವಕವಾದ ವಚನಗಳು ಸೃಷ್ಟಿಸಿದ್ದು ಕಂಡು ಬರುತ್ತದೆ. 'ನೀರ ಕಂಡಲ್ಲಿ ಮುಳುಗುವರಯ್ಯ, ಮರವ ಕಂಡಲ್ಲಿ ಸುತ್ತುವರಯ್ಯ, ಬತ್ತುವ ಜಲವ, ಒಣಗುವ ಮರವ ನೆಚ್ಚಿದವರು ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ' ಎನ್ನುವಲ್ಲಿ ಶ್ರೀಗುರು ಕರುಣದಿಂದ ವಿಜಯಂಗೈಸಿಕೊಟ್ಟ ಪರಮಲಿಂಗ ತನ್ನ ಕರದಲ್ಲಿ ತುಂಬಿಪ್ಪುದಯ್ಯ ಒಲವು ಕಡೆಗೆ ಹೋದ ಮನವ ಧ್ಯಾನವೆಂಬ ಹಸ್ತದಲ್ಲಿ ಹಿಡಿದು ಆ ಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆಯಬಲ್ಲರೇ ಉಳಿದುದೆಲ್ಲಾ ಹುಸಿ ಕಂಡೆಯ್ಯಾ ಮಹಾಲಿಂಗ ಗುರುಸಿದ್ಧೇಶ್ವರ ಪ್ರಭುವೇ' ಇಲ್ಲಿ ಉಪದೇಶದೊಡನೆ ಸೂಕ್ಷ್ಮವಾದ ವಿಡಂಬನೆಯು ವ್ಯಕ್ತವಾಗಿದೆ.

ಶರಣರ ವಚನಗಳಲ್ಲಿ ಕಂಡು ಬರುವ ಮತ್ತೊಂದು ಲಕ್ಷಣ ಆರ್ತ ಹೃದಯ. ಮುಕ್ತಿಯ ಬಯಕೆಯಿಂದ ಹೃದಯವು ಕಾತರಗೊಂಡು ಪ್ರಾರ್ಥಿಸುತ್ತದೆ. 'ವಿಷಯವೆಂಬ ಹಸುರ ನನ್ನ ಮುಂದೆ ಪಸರಿಸದಿರಯ್ಯಾ ಪಶುವೇ ಬಲ್ಲದು ಹಸುರೆಂದೆನಿಸುವದಲ್ಲದೇ ವಿಷಯ ರಹಿತ ಮಾಡಿ ಭಕ್ತಿ ರಸದ ದೇಸಿಯ ಮೇಯಿಸಿ ಸುದ್ದಿಯೆಂಬ ಉದಕವನೆರೆದು ನೋಡಿ ಸಲುಹಯ್ಯಾ ಕೂಡಲಸಂಗಮದೇವ' ಹಾಗೂ ಕೆಸರಲ್ಲಿ ಬಿದ್ದ ಪಶುವಿನಂತೆ ದೆಸೆದೆಸೆಗೆ ಬಾಯಿ ಬಿಡುತ್ತಿದ್ದೇನಯ್ಯಾ ಎಂಬಲ್ಲಿ, ಎನ್ನ ಯೋಗಕ್ಷೇಮ ನಿಮ್ಮದಯ್ಯಾ ಎನ್ನ ಹಾಗೆ ವೃದ್ಧಿ ನಿಮ್ಮದಯ್ಯಾ ಎನ್ನ ಮಾನಾಪಮಾನ ನಿಮ್ಮದಯ್ಯಾ, ಬಳ್ಳಿಗೆ ಕಾಯಿ ದಿಮ್ಮಿತ್ತೆ ಕೂಡಲಸಂಗಮದೇವ' ಈ ವಚನಗಳಲ್ಲಿ ಭಕ್ತಿ, ವೈರಾಗ್ಯ, ಆಪ್ತ ಹೃದಯಗಳನ್ನು ಕಾಣಬಹುದು. ಆತ್ಮಾನಂದ ಅಥವಾ ಲಿಂಗಾಂಗ ಸಾಮರಸ್ಯ ಅಥವಾ ಸತಿ–ಪತಿ ಕೂಟ ಇದು ಸರ್ವ ಶರಣರ ವಚನಗಳ ಪ್ರಮುಖ ಲಕ್ಷಣ. ಪರಮಾತ್ಮನೇ ಪತಿ, ಆತ್ಮನೇ ಸತಿ ಎಂದು ಬಗೆದು ಸತಿ–ಪತಿಗಳ ಸಂಗವನ್ನೆ ಲಿಂಗಾಂಗ ಸಾಮರಸ್ಯವೆಂದು ಬಗೆದು ಆತ್ಮಾನಂದಕ್ಕೆ ಹೋಲಿಸಿದ ವಚನಗಳು ಬಹು ಮನೋಹರವಾಗಿವೆ.

ಎಂಬಲ್ಲಿ ಅಂತರಂಗ ಬಹಿರಂಗ ಆತ್ಮಸಂಗ ಒಂದೇ ಅಯ್ಯಾ ಆರೂಢ ಸುಖವನು ಕೂಡಲಸಂಗಮದೇವನು ತಾನೇ ಬಲ್ಲನು.

ಹೀಗೆ ಶಿವನ ಸಾಕ್ಷಾತ್ಕಾರಕ್ಕೆ ಭಕ್ತಿಯ ಆತ್ಮಾನಂದಕ್ಕೆ ಸತಿ–ಪತಿ ಕೂಡವೇ ಸಾಧನವೆಂದು ಶರಣರು ಶರಣ ಸತಿಪತಿಯಾಗಿ, ಲಿಂಗ ಪತಿಯಾಗಿ ನಡೆದವರುಂಟು. ಇನ್ನೂ ವಚನಗಳಲ್ಲಿ ಭಾವ ಕವಿ ಹೃದಯದ ಮಂದಿರದಲ್ಲಿರುವ ಅವನ ಮನೋದೇವತೆಯನ್ನು ಚಿತ್ರಿಸುವ ಲಕ್ಷಣಯುತವಾದ ವಚನಗಳು ಉಂಟು. 'ಹರಿವ ಹಾವಿಗಂಜಿ, ಉರಿಯ ನೂಲಿಗಂಜಿ, ಒಂದಕ್ಕಂಜುವೇ ಪರಸ್ತ್ರೀ ಜೂಜಿಗಂಜುವೆ ಶಿವಪೂಜೆಯತ್ತ ವಿಷಯದ ಸವಿಯತ್ತ ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು ವೇಶ್ಯಯರ ಎಂಜಲ ಹೇಸದೇ ತಿಂದ ದೋಷಿಗಳನೆ ಎನೆಂಬೆನಯ್ಯಾ ರಾಮನಾಥ ಇಲ್ಲಿ ನೈತಿಕವಾದ ಮೌಲ್ಯಗಳು ಆರಾಧ್ಯ ದೇವತೆಯ ಸ್ವರೂಪ ಲಕ್ಷಣಗಳು ಚಿತ್ರಿತವಾಗಿವೆ.

ಭಾಷಾ ಶೈಲಿಯ ದೃಷ್ಟಿಯಿಂದ ವಚನಗಳು ಅಲಂಕಾರಗಳ ಸುರಿಮಳೆಯಂತೆ ಕಾಣುತ್ತವೆ. ಶಬ್ದಾಲಂಕಾರಗಳು 'ನೀ ಒಲಿದರೆ ಕೊರಡು ಕೊನರುವುದೇ, ನೀ ಒಲಿದರೆ ಬರಡು ಹಯಣುವುದಯ್ಯಾ...' 'ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ನಿಮ್ಮ ಕೀರುತಿ ತುಂಬಿ ಇಲ್ಲಿ ಸಮಪದಗಳ ಸಮಾಕ್ಷರಗಳ ಅಲಂಕಾರ ಆದಿ–ಅಂತ್ಯ ಪ್ರಾಸಗಳು ಮನೋಹರವಾಗಿ ಮೂಡಿ ಬಂದಿವೆ. ದೃಷ್ಟಾಂತಗಳು ಕೂಡಾ ಶರಣರ ವಚನಗಳಲ್ಲಿ ಹೂಬಳ್ಳಿಗೆ ಮೊಗ್ಗೆಗಳಂತೆ ಪೋಣಿಸಿ ಕರಿಘನ ಅಂಕುಶ ಕಿರಿದೆನ್ನಬಹುದು. ಸಿಂಹದ ಮುಂದೆ ಜಿಗಿದಾಟವೇ ಪ್ರಳಯಾಗ್ನಿಯ ಮುಂದೆ ಪತಂಗ ದಾಟುವೆ 'ತುಂಬಿದುದು ತುಳುಕದು ನೋಡಾ ನಂಬಿದುದು ಸಂದೇಹಿಸದು ನೋಡಾ' ಈ ಎಲ್ಲ ವಚನಗಳಲ್ಲಿ ಪ್ರಸಾದಿ ಶಬ್ದಾಲಂಕಾರಗಳನ್ನು ಶಬ್ದ ಔಚಿತ್ಯವನ್ನು, ತಾಳ ಬದ್ಧತೆಯನ್ನು ಸುಂದರವಾದ ದೃಷ್ಟಾಂತಗಳನ್ನು ಕಾಣಬಹುದು. ಶರಣರ ವಚನಗಳು ಒಂದು ರೀತಿಯಲ್ಲಿ ಹೆಚ್ಚಾಗಿ ಸ್ಫುಟಗೊಂಡಿವೆ. 'ಕಾದ ಹಂಚಿನ ಮೇಲೆ ಬಿಟ್ಟ ನೀರಿನಂತೆ ಹುಲಿಯ ಬಾಯಲ್ಲಿ ಸಿಕ್ಕ ಹುಲ್ಲೆಯಂತೆ ಸರ್ಪನ ಬಾಯಲ್ಲಿ ಸಿಕ್ಕ ಕಪ್ಪೆಯಂತೆ' ಎಂದು ಮಾಯೆಯ ಬಾಯಲ್ಲಿ ಸಿಕ್ಕಿ ಜಗವನ್ನು ಅಖಂಡೇಶ್ವರನು ಹೀಗೆ ರೂಪಕಗಳನ್ನು ಕೊಟ್ಟಿದ್ದಾರೆ. ಇನ್ನೂ ಅನೇಕ ರೂಪಕಗಳು ವಚನಗಳಲ್ಲಿ ಹಾಸುಹೊಕ್ಕಾಗಿವೆ.

ಈ ಲಕ್ಷಣಗಳಿಂದ ಕೂಡಿದ ವಚನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ವೈಶಿಷ್ಟ್ಯ ಪೂರ್ಣವಾದ ಸ್ಥಾನಮಾನವನ್ನು ಪಡೆದಿವೆ. ಈ ವಚನಗಳು ಕನ್ನಡ ಸಾಹಿತ್ಯಕ್ಕೆ ಮಾಡಿದ ಉಪಕೃತಿ ಅಷ್ಟಿಷ್ಟಲ್ಲ. ಮೊದಲಿನ ಸಾಹಿತ್ಯ ರೂಪವನ್ನೇ ಬದಲಿಸಿ ಸಾಹಿತ್ಯಕ್ಕೆ ಒಂದು ವಿಶಾಲ ದೃಷ್ಟಿಯನ್ನು ತಂದ ಶ್ರೇಯಸ್ಸು ವಚನಗಳಿಗೆ ಸಲ್ಲುವುದು. ಸಾಹಿತ್ಯವು ಪಂಡಿತ ರಂಜನೆಗಾಗಿರದೇ ಜನಸಾಮಾನ್ಯರ ಜೀವನವನ್ನರಳಿಸಲು ಇದೆ ಎಂಬ ಉದಾತ್ತ ಧ್ಯೇಯವನ್ನು ಕನ್ನಡ ಸಾಹಿತ್ಯಕ್ಕೆ ವಚನಗಳು ಕಾಣಿಕೆಯಾಗಿ ಕೊಟ್ಟವು. ಅಲ್ಲದೇ ಕನ್ನಡ ಸಾಹಿತ್ಯದಲ್ಲಿ ವಚನಗಳು ಸ್ತ್ರೀಯರಿಗೆ ಒಂದು ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಟ್ಟವು.

ಈ ಕಾಲದಲ್ಲಿದ್ದಷ್ಟು ಕವಯಿತ್ರಿಯರು ಕನ್ನಡದಲ್ಲಿ ಇನ್ನಾವ ಕಾಲದಲ್ಲಿಯೂ ದೊರೆಯಲಾರರು. ಕನ್ನಡದ ಬೇರೆ ಯಾವುದೇ ಸಾಹಿತ್ಯಾಂಗಣದಲ್ಲಿ ಕವಿಯ ವ್ಯಕ್ತಿತ್ವವು ಕಂಡು ಬರುವುದಿಲ್ಲ. ಕವಿಯ ಹೃದಯ ಸ್ವಭಾವಗಳು ಸ್ಫುಟವಾಗಿ ಒಡಮೂಡಿದುದು ವಚನಗಳಲ್ಲಿಯೇ ಇದು ವಚನ ಸಾಹಿತ್ಯಕ್ಕೆ ಶರಣರ ಒಂದು ಅಮೂಲ್ಯವಾದ ಕೊಡುಗೆಯಾಗಿದೆ.